





ಉಬುದ್ ಆರ್ಟ್ ಮಾರ್ಕೆಟ್, ಉಬುದ್ ಅರಮನೆ ಚಿಕ್ಕದಾದರೂ ಆಕರ್ಷಕ. ಅಲ್ಲಿರುವ ಸಣ್ಣ ಕಲ್ಲಿನ ಮೂರ್ತಿಗಳಿಗೆ ರೇಷ್ಮೆಯ ಬಟ್ಟೆಯನ್ನುಡಿಸಿದ್ದನ್ನು ನೋಡಿ ಸೋಜಿಗವಾಯಿತು. ಉಬುದ್ ಮಾರ್ಕೆಟ್‌ನಲ್ಲಿ ಖರೀದಿ ನಡೆಸುವುದು ಕಷ್ಟ, ಸಿಕ್ಕಾಪಟ್ಟೆ ಬೆಲೆ ಹೇಳುತ್ತಾರೆ. ಇಲ್ಲೇನಾದರೂ ಕೊಳ್ಳಬೇಕೆಂದರೆ ಚೌಕಾಸಿಯಲ್ಲಿ ನಿಸ್ಸೀಮರಾಗಿರಬೇಕು. ಒಂದು ಲಕ್ಷ ರೂಪಯ್ಯ ಹೇಳಿದ ಅಂಗಡಿಯಾಕೆಯ ಜೊತೆ ಚರ್ಚೆ ಮಾಡಿ ಕೊನೆಗೆ 15,000 ರೂಪಯ್ಯ ತೆತ್ತು ಅಮ್ಮನಿಗೆಂದು ಒಂದು ಶಾಲು ಖರೀದಿಸಿದೆ!

ಬಟುವಾ ದೇವಸ್ಥಾನ: ದೇವಾಲಯದ ಸುಂದರ ಶಿಲ್ಪಕಲೆಯು ಕಣ್ಮನ ಸೆಳೆಯುವಂತಿದೆ. ಬಾಲಿಯ ದೇವಸ್ಥಾನಗಳು ನಮ್ಮಲ್ಲಿಯಂತೆ ಒಂದು ದೇವರಿಗೆ ಸಂಬಂಧಿಸಿದ್ದಲ್ಲ. ಹಲವು ದೈವ ದೇವರುಗಳ ಚಿಕ್ಕ ಚಿಕ್ಕ ಮಂದಿರಗಳಿವೆ. ದೇವಸ್ಥಾನಕ್ಕೆ ಕಲಶವಿರುತ್ತದೆ. ಬಟುವಾ ದೇವಸ್ಥಾನದಲ್ಲಿ ಅಲ್ಲಿಯ ಸಾಂಪ್ರದಾಯಿಕ ಉಡುಗೆ ತೊಡುವುದು ಅಗತ್ಯ. ದೇವಸ್ಥಾನದ ಪ್ರವೇಶದ ಕಟ್ಟಡದಲ್ಲಿ ಲುಂಗಿಯಂತಹ ಬಣ್ಣ ಬಣ್ಣದ ಉಡುಗೆಗಳನ್ನು ಇಟ್ಟಿರುತ್ತಾರೆ. ಅದನ್ನು ಸುತ್ತಿ ಕಟ್ಟಿಕೊಂಡು ಒಳಗೆ ಹೋಗಬೇಕು. ವಾಪಾಸು ಹೋಗುವಾಗ ಹಿಂದಿರುಗಿಸಿದರಾಯಿತು.

ರೈಸ್ ಟೆರೇಸ್: ಬೆಟ್ಟವನ್ನು ಕಡಿದು ಹೊಲ ಮಾಡಿ ಬಹುಮಟ್ಟದಲ್ಲಿ ಅಕ್ಕಿಯನ್ನು ಬೆಳೆಯುವ ವಿಧಾನವಿದು. ಹಸಿರಿನಿಂದ ಬಹಳ ಸುಂದರವಾಗಿ ಕಾಣಿಸುತ್ತಿತ್ತು.

ತನಾಹ್ ಲಾಟ್ ದೇವಸ್ಥಾನ: ತನಾಹ್ ಲಾಟ್‌ನ ಎಂದರೆ ಭೂಮಿ ಸಮುದ್ರ ಎಂದರ್ಥ. ಅಂದರೆ ಸಮುದ್ರದ ಮೇಲಿರುವ ಭೂಮಿ. ಪ್ರಾಕೃತಿಕವಾಗಿ ನಿರ್ಮಿಸಲ್ಪಟ್ಟಿರುವ ಬಂಡೆ ಕಲ್ಲುಗಳು ಸಮುದ್ರ ತಟದಿಂದ ಸುಮಾರು 20 ಮೀಟರ್ ದೂರದಲ್ಲಿ ನೀರಿನ ಮಧ್ಯೆ ನಿಂತಿವೆ. ಸಮುದ್ರದ ಅಲೆಗಳ ನಿರಂತರ ಹೊಡೆತದಿಂದ ದ್ವೀಪದ ಆಕೃತಿ ಸುಂದರವಾಗಿದೆ. ಮೊಣಕಾಲುದ್ದದ ಸಮುದ್ರದ ನೀರನ್ನು ದಾಟಿ ಈ ದೇವಸ್ಥಾನದ ಬುಡ ತಲುಪಬೇಕು.

ಗುಹೆಯಂತಿರುವ ದೇವಸ್ಥಾನದ ಬುಡದಲ್ಲಿ ನೀರಿನ ಜರಿ ಬೀಳುವ ಅಪರೂಪದ ದೇವಸ್ಥಾನವಿದು. ಅಲ್ಲಿರುವ ಪೂಜಾರಿಗಳು ಅಕ್ಕಿಯ ಗಂಧವನ್ನು ಹಣೆಗೊತ್ತಿ ಕಿವಿಯ ಮೇಲೆ ಹೂವಿಟ್ಟರು! ಇದು ಬಾಲಿಯಲ್ಲಿ ಸಾಂಪ್ರದಾಯಿಕವಾಗಿ ಪ್ರಸಾದ ನೀಡುವ ರೀತಿ. ದೇವಸ್ಥಾನದಲ್ಲಿರುವ ಬಂಡೆಯ ಮೇಲ್ಗಡೆ ಮೇಲೇರಿ ಹೋಗಲು ಮೆಟ್ಟಿಲುಗಳಿದ್ದರೂ ಜನಸಾಮಾನ್ಯರಿಗೆ ಪ್ರವೇಶವಿಲ್ಲ. ಪೂಜೆ ಮಾಡುವವರು ಮಾತ್ರ ಹೋಗಬಹುದು.

ವಾಪಸ್ ತಟಕ್ಕೆ ಬಂದು ಬಂಡೆಯ ಮೇಲೆ ಕುಳಿತೆ. ಸಾವಿರಾರು ಮೈಲಿಗಳ ದೂರದಲ್ಲಿ ಕುಳಿತು ನಮ್ಮದೇ ಪ್ರಪಂಚದಲ್ಲಿ ಕಳೆದು ಹೋಗುವ ಆನಂದವೇ ಬೇರೆ! ಸೂರ್ಯಾಸ್ತ ನೋಡಿ ಪ್ರಕೃತಿಯ ಸೌಂದರ್ಯವನ್ನು ಕಣ್ಮನಗಳಲ್ಲಿ ತುಂಬಿಕೊಂಡು ಹೊರಟೆ. ದಾರಿಯ ಮಧ್ಯೆ ಒಂದು ಕೈಯೆತ್ತಿ ಮುಂದೆ ಬೆರಳು ಮಾಡಿರುವ ಒಂದು ದೊಡ್ಡ ಮೂರ್ತಿ ಕಂಡಿತು. ಅದು ಇಂಡೋನೇಷ್ಯಾದ ಪ್ರಥಮ ಅಧ್ಯಕ್ಷರಾದ ಸುಕರ್ಣೊರವರ ಮೂರ್ತಿ ಎಂದು ಡ್ರೈವರ್ ಕೊಮಾಂಗ್ ವಿವರಿಸಿದರು.

ದೆನ್ಪಾಸರ್ ಬಾಲಿ ಏರ್‌ಪೋರ್ಟ್ ಸಮುದ್ರ ತಟದಲ್ಲಿರುವುದೊಂದು ವಿಶೇಷ. ರನ್–ವೇ ಸಮುದ್ರದೊಳಗೆ ವಿಸ್ತರಿಸಿದ್ದು ವಿಮಾನ ನೆಲ ಬಿಟ್ಟು ಹಾರಬೇಕಿದ್ದರೆ, ಇಕ್ಕೆಲದಲ್ಲೂ ವಿಶಾಲ ಸಮುದ್ರ. ನೀರಿನಿಂದಲೇ ವಿಮಾನ ಮೇಲಕ್ಕೆ ಹಾರಿದಂತೆ ಭಾಸವಾಗುತ್ತಿತ್ತು!